ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು
Office of the Deputy Commissioner, Mysuru District, Mysuru
Phone: 0821-2424079, 2422302 E-Mail:dcofficmysuru@gmail.com

ಸಂಖ್ಯೆ: ಸಕಾಲ /02 /2025 (ಇ- 714975) ದಿನಾಂಕ: .03.2025

# ಜಿಲ್ಲಾ ಸಮಾಲೋಚಕ ಹುದ್ದೆಯ ಶಿಫಾರಸ್ಸಿಗೆ ಪ್ರಕಟಣೆ

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ 2014ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾಡಳಿತಕ್ಕೆ ಸಹಕರಿಸಲು ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಅವಶ್ಯಕತೆಯಿದ್ದು, ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಖಾಲಿಯಿರುವ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಯನ್ನು ಭರ್ತಿಮಾಡಲು ಸಕಾಲ ಮಿಷನ್ ಬೆಂಗಳೂರು ಇಲ್ಲಿಗೆ ಶಿಫಾರಸ್ಸು ಮಾಡುವ ಬಗ್ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು http://mysore.nic.in/ ರಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು ರವರಿಗೆ ಕಛೇರಿ ವೇಳೆಯಲ್ಲಿ ಸಲ್ಲಿಸುವುದು. ಲಕೋಟೆ ಮೇಲೆ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರ ಹುದ್ದೆಯ ಅರ್ಜಿ ಎಂದು ನಮೂದಿಸಿ, ಅರ್ಜಿ ಸಲ್ಲಿಸುವುದು.

ಸದರಿ ಹುದ್ದೆಯ ವಿದ್ಯಾರ್ಹತೆ ಮತ್ತು ಕಾರ್ಯ ಅನುಭವವು ಈ ಕೆಳಕಂಡಂತಿದೆ:-

| ಹುದ್ದೆ | ಹುದ್ದೆಗಳಸಂಖ್ಯೆ | ಸಕಾಲಮಿಷನ್ನಿಂದನೀಡುವ ವೇತನ (take home+ Employee PF+ Employer PF Contribution+ Professional Tax) ರೂ.ಗಳಲ್ಲಿ | ವಿದ್ಯಾರ್ಹತೆ | ಕನಿಷ್ಟ ಒಟ್ಟಾರೆ ಅನುಭವ |
|---|---|---|---|---|
| ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 1 | 27,100 (23,150+1,800+ 1,950+200) | BE or B.Tech/BCA Stream: Computer Scienceor Information Science Engineering Electronic and Communication Telecom | Fresher (Weightage will be given to experience) |

–

**ವಿಶೇಷ ಸೂಚನೆ:**

1. ಸದರಿ ಹುದ್ದೆಯ ಆಯ್ಕೆಯನ್ನು ಅರ್ಹತೆಯ ಆಧಾರದ ಮೇಲೆ ಸಂದರ್ಶನದ ಮೂಲಕ ನಡೆಸಲಾಗುವುದು ಹಾಗೂ ಜಿಲ್ಲಾಡಳಿತದ ನಿರ್ಧಾರವೇ ಅಂತಿಮವಾಗಿರುತ್ತದೆ. .
2. ಜಿಲ್ಲಾಡಳಿತ ಶಿಫಾರಸ್ಸು / ದೃಡಿಕರಣದ ಆಧಾರದ ಮೇರೆಗೆ ಸಕಾಲಮಿಷನ್ ಬೆಂಗಳೂರು ರವರ ಕಛೇರಿವತಿಯಿಂದ ನೇಮಕಾತಿ ಆದೇಶ ನೀಡಲು ಕ್ರಮವಹಿಸಲಾಗುತದೆ. .
3. ಈ ಹಿಂದೆ ಸಕಾಲ ಯೋಜನೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಆದ್ಯತೆ ನೀಡಲಾಗುವುದು.
4. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ: 03-03-2025 ಹಾಗೂ ಅರ್ಜಿ ಸಲ್ಲಿಸಲು

ಕೊನೆಯ ದಿನಾಂಕ: 10-03-2025 ಆಗಿರುತ್ತದೆ.

5. ಸದರಿ ಹುದ್ದೆಯು ಸರ್ಕಾರದ ಖಾಯಂ ಹುದ್ದೆಯಾಗಿರುವುದಿಲ್ಲ.
6. ಮೇಲೆ ತಿಳಿಸಿದ ಹುದ್ದೆಗಳಿಗೆ ನಿರ್ದಿಷ್ಟಪಡಿಸಿರುವ ನಿಗಧಿತ ವಿದ್ಯಾರ್ಹತೆಗಳನ್ನು ಹೊರತುಪಡಿಸಿ ಇತರೆ ವಿಷಯ/ ವಿಭಾಗಗಳ ಅಥವಾ ತತ್ಸಮಾನ ವಿದ್ಯಾರ್ಹತೆಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
7. ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಈ ಮೇಲೆ ನಿಗಧಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಉತ್ತೀರ್ಣಗೊಂಡಿರತಕ್ಕದ್ದು ಹಾಗೂ ಪದವಿ ಪತ್ರವನ್ನು ಹೊಂದಿರತಕ್ಕದ್ದು.
8. ಸದರಿ ನೇಮಕಾತಿಯು ತಾತ್ಕಾಲಿಕವಾಗಿದ್ದು, ಸೇವೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೇ ನೇಮಕಾತಿಯನ್ನು ರದ್ದುಗೊಳಿಸಲಾಗುವುದು.

Digitally signed by
LAKSHMIKANTH REDDY G
Date: 02-03-2025
20:30:56

ಜಿಲ್ಲಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು.

ರವರಿಗೆ:

ಉಪನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೈಸೂರು ರವರಿಗೆ ಕಳುಹಿಸುತ್ತಾ ಮೇಲ್ಕಂಡ ಪ್ರಕಟಣೆಯನ್ನು ಸರ್ಕಾರಕ್ಕೆ ವೆಚ್ಚಬಾರದಂತೆ ದೈನಂದಿನ ಪತ್ರಿಕೆಗಳಲ್ಲಿ ಸುದ್ದಿ ರೂಪದಲ್ಲಿ ಪ್ರಕಟಿಸುವುದು.